ಹಗಲೆನ್ನದೆ ಬೆಳೆಯುವ 'ಬಡ್ಡಿ ಮಗನನ್ನು' ಬೆಳೆಸಿ, 'ಅಸಲಪ್ಪನ' ಸಮೇತ ಹಿಂದಿರುಗಿಸಿ, ಜೋಬು ಖಾಲಿ ಮಾಡಿಕೊಂಡರೂ ಮನಸ್ಸಿನ ನೆಮ್ಮದಿಯನ್ನು ಕಾಪಾಡಿಕೊಂಡಿದ್ದೇನೆ. ಈ ಸಾಲ ಇದೆಯಲ್ಲ ಅದೊಂದು ರೀತಿಯಲ್ಲಿ ಶೂಲ ಇದ್ದ ಹಾಗೆ, ಒಮ್ಮೆ ನಮ್ಮ ಮನಸ್ಸಿಗೆ ನಾಟಿದರೆ ಪ್ರತಿಕ್ಷಣವೂ ಅದು ಇನ್ನಷ್ಟು ಮತ್ತಷ್ಟು ಇಳಿಯುತ್ತಲೇ ಹೋಗುತ್ತದೆ. ಇಂಥ ಈ ಸಾಲ ಮಹಾತ್ಮೆಯ ಒಳಹೊರಗುಗಳನ್ನು ದಾರಿಯುದ್ದಕ್ಕೂ ಕಣ್ಣುಹಾಯಿಸುತ್ತಾ ಹೋಗೋಣ, ಬನ್ನಿಮತ್ತೆ.

ಇಂದಿನ ದಿನಗಳಲ್ಲಿ 'ಸಾಲ' ಎಂಬ ಪದ ಬಹು ಆಕರ್ಷಣೀಯವಾದುದಾಗಿದೆ. ಆದರೆ, ಹಿಂದೊಂದು ಕಾಲದಲ್ಲಿ ಈ ಪದವೂ ಅಷ್ಟಾಗಿ ಚಾಲ್ತಿಯಲ್ಲಿರಲಿಲ್ಲ ಮತ್ತು ಸಾಲವೂ ಸುಲಭವಾಗಿ ಹುಟ್ಟುತ್ತಿರಲಿಲ್ಲ. ಇಂದು ಹಾಗಲ್ಲ. 'ನಾವು ಸಾಲ ಕೊಡ್ತೀವಿ ಬನ್ನಿ', 'ಅತಿ ಕಡಿಮೆ ಬಡ್ಡಿಯಲ್ಲಿ ಅತಿ ಶೀಘ್ರದಲ್ಲಿ ನಮ್ಮ ಬ್ಯಾಂಕಿನಿಂದ ನಿಮಗೆ ಸಾಲ ಲಭ್ಯ', 'ಕಡಿಮೆ ದಾಖಲೆ ತ್ವರಿತ ಸಾಲ', 'ಸಾಲಕ್ಕಾಗಿ ಅಲ್ಲಿ ಇಲ್ಲಿ ಪರದಾಡಬೇಡಿ, ನಮ್ಮಲ್ಲಿಗೆ ಬನ್ನಿ', 'ಸೊನ್ನೆ ಬಡ್ಡಿಯಲ್ಲಿ ಸೊಗಸಾದ ಕಾರು ಕೊಂಡೊಯ್ಯಿರಿ' ಇತ್ಯಾದಿ ಜಾಹೀರಾತು ಹಾಕಿಕೊಂಡ ವಾಣಿಜ್ಯ ಬ್ಯಾಂಕುಗಳು, ಹಣಕಾಸಿನ ಸಂಸ್ಥೆಗಳು, ವ್ಯಾಪಾರಿ ಸಂಸ್ಥೆಗಳು 'ಬೇಗ ಬೇಗ ಸಾಲಗಾರರಾಗಿ ಬನ್ನಿ' ಎಂದು ಕೈ ಬೀಸಿ ಕರೆಯುತ್ತಿವೆ. 'ಗೃಹಸಾಲ', 'ವಿದ್ಯಾರ್ಥಿ ಸಾಲ', 'ವಾಹನ ಸಾಲ', 'ವೈಯಕ್ತಿಕ ಸಾಲ'–ಹೀಗೆ ಹತ್ತು ಹಲವಾರು ಬಗೆಯ ಸಾಲಗಳು ಜನರಿರುವಲ್ಲಿಗೆ ಬಂದು 'ನನ್ನನ್ನು ತೆಗೆದುಕೊಳ್ಳಿ, ನನ್ನನ್ನು ಕರೆದುಕೊಳ್ಳಿ' ಎಂದು ನಿಂತು ನಿಂತಲ್ಲಿಗೇ ಬಂದು ಅಂಗಲಾಚುವುದು ಸಾಮಾನ್ಯ ಸಂಗತಿಯೇ ಆಗಿದೆ. ಹಾಗಾಗಿಯೇ ಸಮಾಜದಲ್ಲಿ 'ಸಾಲೋತ್ಸವ', 'ಲೋನೋತ್ಸವ'ಗಳು ಆಗಿಂದಾಗ್ಗೆ ವಿಜೃಂಭಿಸುತ್ತಿವೆ. ಸಾಲ ಕೂಡ ಒಂದು ಉತ್ಸವವೇ ಆಗಿಹೋಗಿದೆ ನಮ್ಮಲ್ಲಿ. ಇಷ್ಟಕ್ಕೂ ಉಪವಾಸವನ್ನು ಹಬ್ಬವನ್ನಾಗಿ ಆಚರಿಸುವ 'ಉಪವಾಸದ ಹಬ್ಬ'ದ ಒಂದು ಭವ್ಯ ಪರಂಪರೆಯೇ ನಮ್ಮಲ್ಲಿಲ್ಲವೆ? ಸಾಲ ಸಿಕ್ಕಾಗ ವ್ಯಕ್ತಿ ಇನ್ನಿಲ್ಲದ ಉತ್ಸಾಹದಿಂದ ಮೆರೆದಾಡುವುದು, ಅದನ್ನು ಬಡ್ಡಿ ಸಮೇತ ಹಿಂದಿರುಗಿಸಬೇಕಾಗಿ ಬಂದಾಗ ಪರದಾಡುವುದು, ಅದು ದೊಡ್ಡ ಮೊತ್ತದ ಸಾಲವೇ ಆಗಿದ್ದರೆ ಪರದೇಶಕ್ಕೆ ಪರಾರಿಯಾಗುವುದು–ಹೀಗೆ ನಾನಾ ರೂಪಗಳಲ್ಲಿ, ನಾನಾ ವರಸೆಗಳಲ್ಲಿ ಸಾಲದ ಅಸ್ತಿತ್ವ ಇದೆ ಅನ್ನಬಹುದು.

'ಕಡ' ('ಕಡ ಸಿಕ್ಕಿ ಬಡವ ಕೆಟ್ಟ'), 'ಉದ್ದರಿ' ('ಉದ್ದರಿ ತಂದವನು ಉದ್ಧಾರವಾಗ್ತಾನ್ಯೆ?') 'ಎರವಲು' ('ಎರವಲು ತಂದು ಎಕ್ಕುಟ್ಟೋದ') ಎಂಬ ಸಮಾನಾರ್ಥಕ ಪದಗಳನ್ನು ಹೊಂದಿರುವ ಸಾಲ ಬಹು ಹಿಂದಿನಿಂದಲೂ ಮನುಷ್ಯನ ಒಡನಾಡಿಯೇ ಆಗಿಹೋಗಿದೆ. ಜೀವನದ ಒಂದಲ್ಲ ಒಂದು ಕಾಲದಲ್ಲಿ ಪ್ರತಿಯೊಬ್ಬ ಮನುಷ್ಯ ಒಂದು ಸಲವಾದರೂ ಸಾಲ ಮಾಡಿಯೇ ತೀರುತ್ತಾನೆ. ಅದು ಹಣಕಾಸಿನ ರೂಪದಲ್ಲಿರಬಹುದು ಅಥವಾ ವಸ್ತುವಿನ ರೂಪದಲ್ಲಿರಬಹುದು. ಆದರೆ, ವಿಷಯ ವ್ಯಾಪ್ತಿಯ ದೃಷ್ಟಿಯಿಂದ ನಮ್ಮ ಬರಹವನ್ನು ಹಣಕಾಸಿನ ಸಾಲಕ್ಕಷ್ಟೇ ಸೀಮಿತಗೊಳಿಸಿಕೊಳ್ಳುವುದು ಸಾಂದರ್ಭಿಕವೂ ಹೌದು, ಸಾಮಯಿಕವೂ ಹೌದು. ನಾಣ್ಯಗಳ ಝಣ ಝಣ ಶಬ್ದದ ಮುಂದೆ ಅಥವಾ ಗರಿ ಗರಿಯಾದ ನೋರ ನೋರ ಶಬ್ದ ಮುಂದೆ ಯಾವ ವಸ್ತುವಿನ ಯಾವ ಶಬ್ದ ತಾನೆ ಆಪ್ಯಾಯಮಾನವಾಗಿರುವುದು ಹೇಳಿ?

ಮನುಷ್ಯ ಸಾಮಾನ್ಯವಾಗಿ ಸಾಲ ಮಾಡುವುದು ಹಣದ ಕೊರತೆ ಬಿದ್ದಾಗ ಮಾತ್ರ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ವ್ಯಕ್ತಿಗೆ ತಾನು ಸಂಪಾದಿಸಿದ ಹಣ ಜೀವನ ನಿರ್ವಹಣೆಗೆ ಸಾಲದಾದಾಗ ಅಥವಾ ಯಾವುದಾದರೂ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಾಗ ಉಂಟಾಗುವ ಹಣದ ಕೊರತೆಯನ್ನು ಸರಿದೂಗಿಸಲು ಸಾಲ ಮಾಡುವುದು ಒಂದು ಬಗೆಯಾದರೆ, ತನ್ನ ವೈಯಕ್ತಿಕ ಚಟಗಳನ್ನು ಅಥವಾ ಆಸೆಗಿಂತ ಮಿಗಿಲಾಗಿ ದುರಾಸೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸಾಲ ಮಾಡುವುದು ಇನ್ನೊಂದು ಬಗೆಯಾಗಿರುತ್ತದೆ. ಈ ಪೈಕಿ ಮೊದಲನೆಯದನ್ನು ಸಕಾರಾತ್ಮಕ